ಗಮನ ಸೆಳೆಯುವ ಸೂಚನೆ

(i) ಬಡ ಗ್ರಾಮಸ್ಥರಿಗೆ ಸೀರೆ ಹಾಗೂ ಪಂಚೆಗಳ ವಿತರಣೆಯಲ್ಲಿ ವಿಳಂಬ.

ಶ್ರೀ ಕೆ. ಹೆಚ್. ಶ್ರೀನಿವಾಸ್.--ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಆಪೂರ್ಣಗೊಂಡಿರುವುದರಿಂದ ಬಡ ಗ್ರಾಮಸ್ಥರಿಗೆ ಸೀರೆಗಳ ಹಾಗೂ ಪಂಚೆಗಳ ವಿತರಣೆಯ ಕಾರ್ಯವನ್ನು ಮುಂದೂಡಿರುವ ವಿಚಾರದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ಈ ಸಭೆಯ ಮುಖಾಂತರವಾಗಿ ನನ್ನ ಅಥವಾ ಸರ್ಕಾರದ ಗಮನವನ್ನು ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಸೆಳೆದಿದ್ದಾರೆ. ನಮ್ಮ ಗಮನವನ್ನು ಅವರು ಸೆಳೆಯದೇ ಇದ್ದಿದ್ದರೆ, ಆಶ್ಚರ್ಯವಾಗುತ್ತಿತ್ತು. ಅವರು ಸೆಳೆದಿದ್ದಾರೆ. ಆದಕ್ಕಾಗಿ ಈ ಸದನದ ಮುಖಾಂತರವಾಗಿ ಅವರಿಗೆ ಒಂದು ಸ್ಪಷ್ಟೀಕರಣ ಕೊಡತಕ್ಕಂತಹ ಅವಕಾಶ ನನಗೆ ಸಿಕ್ಕಿತು. ಆದಕ್ಕಾಗಿ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಆದನ್ನು ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.--ತಥಾಸ್ತು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಶುಭಮಸ್ತು.

ಶ್ರೀ ರಾಮಕೃಷ್ಣ ಹೆಗಡೆ.—ಕಡಿಮೆ ದರದಲ್ಲಿ ಬಡಬಗ್ಗರಿಗೆ ಹೆಂಗಸರಿಗೆ ಒಂದು ಜೊತೆ ಸೀರೆ, ಗಂಡಸರಿಗೆ ಒಂದು ಜೊತೆ ಪಂಚೆ, ಇವುಗಳನ್ನು ಪೂರೈಕೆ ಮಾಡತಕ್ಕಂತಹ ಹೊಸ ನೀತಿ, ಹೊಸ ಸ್ಕೀಮಿನ ಘೋಷಣೆಯನ್ನು ಮಾರ್ಚ್ ತಿಂಗಳಲ್ಲಿ ರಾಜ್ಯಪಾಲರ ಭಾಷಣದ ಮುಖಾಂತರವಾಗಿ ಸರ್ಕಾರ ಮಾಡಿದ್ದುಂಟು. ಮಾರ್ಚ್ ತಿಂಗಳಿಂದ ಇಂದಿಗೆ ನಾಲ್ಕೂವರೆ, ಐದು ತಿಂಗಳಾಯಿತು. ಸ್ವಾತಂತ್ರ್ಯ ದಿನೋತ್ಸವದಂದು ಶುಭ ದಿವಸ. ಆದ್ದರಿಂದ ಆವೊತ್ತು ಇದರ ಉದ್ಘಾಟನೆ ಮಾಡಬೇಕೆಂದು ನಮ್ಮ ನಿರೀಕ್ಷೆಯಿತ್ತು. ಇದು ಮೊಟ್ಟ ಮೊದಲನೆಯದಾಗಿ ಜಾರಿಗೆ ಬರತಕ್ಕಂತಹ ಒಂದು ಹೊಸ ಯೋಜನೆ. ಸುಮಾರು ೩೫ ಲಕ್ಷ ಗಂಡಸರು, ೩೫ ಲಕ್ಷ ಹೆಂಗಸರಿಗೆ ಇವರಿಂದ ಲಾಭವಾಗುತ್ತದೆ. ಇದಕ್ಕೆ ಸುಮಾರು ೧೮ ಕೋಟಿ ರೂಪಾಯಿಂಗಳು ವಿರ್ಚಾಗುತ್ತದೆ. ಇದಕ್ಕೆ ಸುಮಾರು ೧೭ ಕೋಟಿ ಮೀಟರ್‌ನಷ್ಟು ಬಟ್ಟೆ ಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದು ಸಣ್ಣ ಯೋಜನೆಯಲ್ಲ. ನಮ್ಮ ಮನಸ್ಸಿನಲ್ಲಿ ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಪ್ರಾರಂಭ ಮಾಡಬೇಕೆಂಬ ಉತ್ಸುಕತೆಯಿದ್ದರೂ, ಇದನ್ನು ಪೂರ್ಣ ಸಿದ್ಧತೆ, ತಯಾರಿ ಮಾಡಿಕೊಳ್ಳದೆ ಇದನ್ನು ಉದ್ಘಾಟನೆ ಮಾಡುವುದು ಮತ್ತು ಜನರಲ್ಲಿ ಆಸೆ ಹುಟ್ಟಿಸುವುದು. ನಂತರ ಒಂದೆರಡು ತಿಂಗಳಲ್ಲಿ ಅವರು ಅಂಗಡಿ ಹತ್ತಿರ ಹೋಗಿದಾಗ ಸೀರೆಯಿಲ್ಲ, ಪಂಚೆ ಇಲ್ಲವೆಂದು ಅವರನ್ನು ವಾಪಸ್ ಕಳಿಸುವುದು ಸರಿಯಲ್ಲ. ಇದರ ಬಗ್ಗೆ ಸಿದ್ಧತೆ ನಡೆದಿದೆ. ಬಹುಮಟ್ಟಿಗೆ ಆ ಸಿದ್ಧತೆ ಮುಗಿದಿದೆ. ಎಲ್ಲಾ ಕಡೆಗೆ, ೧೮ ಜಿಲ್ಲೆಗಳಲ್ಲಿ ೧೭೫ ತಾಲ್ಲೂಕುಗಳಲ್ಲಿ ಎಲ್ಲಾ ಹಳ್ಳಿಗಳಲ್ಲಿ ಒಂದೇ ಸಲ ಇದನ್ನು ಪ್ರಾರಂಭ ಮಾಡತಕ್ಕದ್ದಲ್ಲ. ಸ್ವಲ್ಪ ಮಟ್ಟಿಗೆ ಸಿದ್ಧತೆ ನಡೆದಿಲ್ಲ. ಹೋದ ವರ್ಷ ಈ ಯೋಜನೆಯನ್ನು ಮಾಡಿಕೊಂಡಿದ್ದರೆ, ನಾವು ಬಟ್ಟೆಯನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಕೇವಲ ೪—೫ ತಿಂಗಳಿನಿಂದ ಈಚೆಗೆ ಈ ಘೋಷಣೆಯನ್ನು ನಾವು ಮಾಡಿರುವುದು. ಈ ಯೋಜನೆ ಪ್ರಾರಂಭವಾದ ಮೇಲೆ ಯಾವುದೇ ದೋಷ ಅದರಲ್ಲಿ ಇರಕೂಡದು. ಜನರಿಗೆ ನಿರಾಶೆಯಾಗಕೂಡದು. ಒಂದು ಸಾರಿ ಪ್ರಾರಂಭವಾದ ಮೇಲೆ ಸರಾಗವಾಗಿ ಕಡಿಮೆ ದರದಲ್ಲಿ ಸೀರೆ, ಕುಪ್ಪಸ ಮತ್ತು ಪಂಚೆ, ಷರ್ಟಿನ ಬಟ್ಟೆ ಸಿಗಬೇಕೆಂಬ ಉದ್ದೇಶದಿಂದ ಕೇವಲ ಎರಡು ತಿಂಗಳು ಮಾತ್ರ ಇದನ್ನು ಮುಂದೆ ಹಾಕಿದ್ದೇವೆ. ಗಾಂಧೀಜಿಯವರ ಜನ್ಮ ದಿವಸ ಇದನ್ನು ಪ್ರಾರಂಭ ಮಾಡಬೇಕೆಂದು ನಿರ್ಧಾರ ಮಾಡಿಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇನ್ನೊಂದು ವರ್ಷ ಬಜೆಟ್ ಬಂದಾಗ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಮಾತು ಆಡಿದಂತೆ ನಡೆಸತಕ್ಕಂತಹವರು.

ಶ್ರೀ ಆರ್. ಎಸ್. ನಾಯಕ್.—೧೫ನೇ ತಾರೀಖು ಕೊಡುತ್ತೇವೆಂದು ಹೇಳಿದಿರಿ, ಕೊಡಲಿಲ್ಲ. ನೀವು ಮಾತನಾಡಿದಂತೆ ನಡೆಸಿಲ್ಲ.

ಅಧ್ಯಕ್ಷರು.--ಮಾನ್ಯ ಸದಸ್ಯರು ಸಮಾಧಾನದಿಂದ ಇರಬೇಕು.

ಶ್ರೀ ರಾಮಕೃಷ್ಣ ಹೆಗಡೆ — ಕರ್ನಾಟಕದ ಜನತೆ ನಾವು ಹೇಳಿದಂತೆ ನಡೆಯುತ್ತೇವೆಂದು, ನಮ್ಮಲ್ಲಿ ಪುನಃ ವಿಶ್ವಾಸವಿಟ್ಟ ಕಾರಣ, ನಾವು ಆರಿಸಿ ಬಂದಿದ್ದೇವೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ನಾಯಕರಿಗೆ ಇಷ್ಟು ಮಾತ್ರ ಹೇಳಬಲ್ಲೆ. ಯಾವ ಸರ್ಕಾರವೂ ಕೂಡ ಚುನಾವಣೆ ಮುಗಿದು ಮೂರು ತಿಂಗಳೊಳಗೆ ಇಂತಹ ಕಾರ್ಯಕ್ರಮವನ್ನು ತೆಗೆದುಕೊಂಡು ಮಾಡಿದಂತಹ ಉದಾಹರಣೆ ಇಲ್ಲ. ನಾವು ಇದನ್ನು ಆರು ತಿಂಗಳು ಅಥವಾ ಒಂದು ವರ್ಷ ಮುಂದೆ ಹಾಕಬಹುದಾಗಿತ್ತು. ನಾವು ಆ ರೀತಿ ಮಾಡಿಲ್ಲ. ನಮಗೆ ಇನ್ನು ೫ ವರ್ಷ ಅವಕಾಶ ಇತ್ತು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನುಡಿದಂತೆ ನಡೆದಿಲ್ಲವೆಂದರೆ ಏನು? ಇನ್ನು ಎರಡು ತಿಂಗಳು ಮುಂದೆ ಹೋಯಿತು ಅಷ್ಟೆ. ಆಗಸ್ಟ್ ೧೫ರ ಬದಲು ಅಕ್ಟೋಬರ್ ೨ ಎಂದು ಮಾಡಿದ್ದೇವೆ. ಇದೇ ವರ್ಷ ಅಕ್ಟೋಬರ್ ೨ನೇ ತಾರೀಖು ಪ್ರಾರಂಭ ಮಾಡುತ್ತೇವೆ. ಮಾನ್ಯ ನಾಯಕ್‌ರವರಿಗೆ ನೆನಪು ಮಾಡಿಕೊಡಬೇಕು. ಅದು ೮ನೇ ಅಕ್ಟೋಬರ್ ಅಲ್ಲ. ೮ನೇ ಅಕ್ಟೋಬರ್ ಎಂದು. ನೀವು ಬಹುಶಃ ತಪ್ಪು ತಿಳಿದುಕೊಂಡಿರಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಪ್ರಶ್ನೆ ಎತ್ತಿದ್ದೇ ಒಳ್ಳೆಯದಾಯಿತು ಎಂದು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ನಾವು ಈ ಬಗ್ಗೆ ಪ್ರಶ್ನೆ ಕೇಳುತ್ತೇವೆಂದು ನಿರೀಕ್ಷೆ ಮಾಡಿದ್ದರು ಎಂದು ಗೊತ್ತಾಗುತ್ತಿದೆ. ನಾವೂ ಸಹ ಮಾನ್ಯ ಮುಖ್ಯ ಮಂತ್ರಿಗಳು ಬುದ್ಧಿವಂತಿಕೆಯ ಉತ್ತರ ಕೊಡುತ್ತಾರೆಂದು ನಿರೀಕ್ಷೆ ಮಾಡಿದ್ದೆವು: ಈಗ ಪತ್ರಿಕೆಯಲ್ಲಿ ಇಷ್ಟು ಮಾತ್ರ ಬಂದಿದೆ. ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಮುಗಿಯದೇ ಇದ್ದುದರಿಂದ, ಇದನ್ನು ಆಗಸ್ಟ್ ೧೫ರಿಂದ ಅಕ್ಟೋಬರ್ ೨ಕ್ಕೆ ಮುಂದೆ ಹಾಕಿದೆ ಎಂದು ಬಂದಿದೆ. ಇದನ್ನು ಯಾರು ಕೊಟ್ಟರು ಎಂದು ಇಲ್ಲ. ನನಗೆ ಕೊಟ್ಟಂತಹ ಹೇಳಿಕೆಯಲ್ಲಿ ಈಗ ನಾವು ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಅಕ್ಟೋಬರ್ ೨ನೇ ತಾರೀಖು ಎಂದು ಡಿಸಿಷನ್ ತೆಗೆದುಕೊಂಡಿದ್ದೇವೆ ಎನ್ನುವುದು ಗೊತ್ತಾಗಿದೆ ನಮ್ಮ ದೇಶದಲ್ಲಿ ಶುಭ ದಿವಸಗಳಿಗೆ ಕಡಿಮೆ ಇಲ್ಲ. ಅಕ್ಟೋಬರ್ ೨, ನಂತರ ಜನವರಿ ೨೬, ನಂತರ ಆಗಸ್ಟ್ ೧೫, ಅಕ್ಟೋಬರ್ ೨ ಈ ರೀತಿ ಬೇಕಾದಷ್ಟು ಇವೆ. ಒಳ್ಳೆಯ ಕೆಲಸವನ್ನು ಕೆಟ್ಟ ದಿವಸ ಮಾಡಿದರೂ ಅದು ಒಳ್ಳೆಯದೇ ಆಗುತ್ತದೆ. ಅದು ಅಲ್ಲ, ಇಲ್ಲಿ ಮುಖ್ಯ ಪ್ರಶ್ನೆ. ಈ ಹೇಳಿಕೆಯಲ್ಲಿ ಅನೇಕ ವಿಚಾರಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ, ಕೆಲವು ವಿಚಾರಗಳನ್ನು ಹೇಳಿದರು. ಕೆಲವು ವಿಚಾರಗಳನ್ನು ಬಿಟ್ಟಿದ್ದಾರೆ. ಈ ಹೇಳಿಕೆಯಲ್ಲಿ ಏನು ಕಂಡು ಬರುತ್ತದೆ ಎಂದರೆ, ನಾವು ಸಾಕಷ್ಟು ಸಿದ್ಧತೆ ಮಾಡಿದರೂ ಈ ಯೋಜನೆಯನ್ನು ಪೂರ್ಣ ಮಾಡಲಿಕ್ಕೆ ಆಗಿಲ್ಲ, ನಮ್ಮ ಕೈಯಲ್ಲಿ ಆದಾಗ ಮಾಡುತ್ತೇವೆ ಎನ್ನುವ ಅರ್ಥ ಬರುವಷ್ಟರಮಟ್ಟಿಗೆ ಶಬ್ದವನ್ನು ಬಳಕೆ ಮಾಡಿ ಹೇಳಿದ್ದಾರೆ. ತಾವು ಆಗಸ್ಟ್ ೧೫ ಎಂದು ಯಾವ ನಿರ್ಧಾರದಿಂದ ಜನರಿಗೆ ತಿಳಿಸಿದ್ದಿರಿ ? ನಮಗೆ ಬರುವ ಅನುಮಾನ ಏನು ಅಂದರೆ ಪ್ರತಿಯೊಂದು ಕಾರ್ಯಕ್ರಮದ ಬಗ್ಗೆ ತಾರೀಖು ನಿಗದಿ ಮಾಡಬೇಕಾದರೆ ಜವಾಬ್ದಾರಿಯಿಂದ ತಾರೀಖು ನಿಗದಿ ಮಾಡಲಿಲ್ಲವೇ ? ತಾವು ಬಜೆಟ್ ಭಾಷಣದಲ್ಲಿ ಏನು ಹೇಳಿದ್ದೀರಿ, ಇದಕ್ಕೆ ಬೇಕಾದಂಥ ಪೂರ್ತಿ ಬಟ್ಟೆಯನ್ನು ಕೈಮಗ್ಗದಿಂದ ಪಡೆಯುತ್ತೇವೆಂದು ಹೇಳಿದ್ದೀರಿ. ನಮಗೆ ತಿಳಿದು ಬಂದ ಪ್ರಕಾರ ಹೇಳುವುದಾದರೆ ಕೈಮಗ್ಗದಿಂದ ಇಷ್ಟು ಬಟ್ಟೆಯನ್ನು ಪಡೆಯಲಿಕ್ಕೆ ಸಾಧ್ಯವಿಲ್ಲ. ಅಲ್ಲದೆ, ಕೆಲವೊಂದು ರೋಗಗ್ರಸ್ಥ ಗಿರಣಿಗಳನ್ನು ರೀಹೆಬಿಲಿಟೇಟ್ ಮಾಡಲಿಕ್ಕೆ ತಾವು ಪ್ರಯತ್ನ ಮಾಡುತ್ತಿದ್ದೀರಿ, ಜೊತೆಗೆ ಖಾಸಗಿಯವರ ಹತ್ತಿರ ವ್ಯವಹಾರ ಮಾಡುತ್ತಿದ್ದೀರೆಂದು ತಿಳಿದುಬಂದಿದೆ. ನಾನು ಈ ಪ್ರಶ್ನೆ ಕೇಳುವವರಿಗೂ ಸರ್ಕಾರ ಏತಕ್ಕೆ ಸುಮ್ಮನೆ ಕುಳಿತುಕೊಳ್ಳಬೇಕಾಗಿತ್ತು ? ಜನರಿಗೆ ಉತ್ತರ ಹೇಳಬೇಕಾದಂಥ ಜವಾಬ್ದಾರಿ ಇರಲಿಲ್ಲವೇ ? ಆಗಸ್ಟ್ ೧೫ನೇ ತಾರೀಖು ಜನರು ಎಲ್ಲಾ ಕಡೆ ಸರ್ಕಾರದಿಂದ ಸೀರೆ ಕೊಡುತ್ತಾರೆ, ಬಟ್ಟೆ ಕೊಡುತ್ತಾರೆಂದು ಕಾಯ್ದುಕೊಂಡು ಕುಳಿತಿದ್ದರು. ವಿಧಾನ ಸಭೆ ನಡೆಯುತ್ತಿತ್ತು. ವಿಧಾನ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಾವು ಇದನ್ನು ಹೇಳಬಹುದಿತ್ತು. ನಾನು ಪ್ರಶ್ನೆ ಹಾಕುವವರೆಗೂ ಇದಕ್ಕೋಸ್ಕರ ಕಾಯಬೇಕಾದ್ದು ಇರಲಿಲ್ಲ. ನೀವು ಕೊಟ್ಟಂತಹ ತಾರೀಖಿನ ಏತಕ್ಕೆ ಮುಂದೆ ಹೋಯಿತು ? ವಿಧಾನಸಭೆಯಲ್ಲಿ ಇರತಕ್ಕ

ಜನಗಳಿಗೆ ತಾರೀಖು ಮುಂದೆ ಹೋಗುವಂತಾದ್ದು ಗೊತ್ತಾಗದೇ ಇರುವಾಗ ಬೇರೆ ಜನರಿಗೆ ಹೇಗೆ ಗೊತ್ತಾಗುತ್ತದೆ ? ಇದು ಜಾಣ್ಮೆಯಿಂದ ತಪ್ಪಿಸಿಕೊಳ್ಳುವಂತಾದ್ದು ಅಲ್ಲ. ಕರ್ನಾಟಕ ಜನತೆ ಓಟು ಕೊಟ್ಟಿರಬಹುದು ಆದರೆ ಅವರು ಇವೊತ್ತು ವಿಚಾರ ಮಾಡುತ್ತಿದ್ದಾರೆ. ತಮಗೆ ಒಂದು ಗಾದೆ ಹೇಳ ಬೇಕೆಂದರೆ ನಿಮಿತ್ತ ಸಿಕ್ಕಿತು ಎಂದು ಬೆಳಕು ಹರಿಯುವವರೆಗೂ ಕದ್ದ ಎಂದು ಹಾಗೆ ಆಗಬಾರದು. ಈಗ ತಾವು ಎಷ್ಟು ಬಟ್ಟೆ ಸಂಗ್ರಹ ಮಾಡಿದ್ದೀರಿ ಇನ್ನು ಸಂಗ್ರಹ ಮಾಡಬೇಕಾದ್ದು ಎಷ್ಟು ಇದೆ.. ಅದನ್ನು ತಿಳಿಸಬೇಕು. ಈ ಯೋಜನೆಯನ್ನು ಆಗಸ್ಟ್ ೧೫ನೇ ತಾರೀಖು ಪ್ರಾರಂಭ ಮಾಡಬೇಕು ಎಂದು ನಿಮ್ಮ ಸರ್ಕಾರದಲ್ಲಿ ಜವಾಬ್ದಾರಿಯುತವಾಗಿ ನಿರ್ಧಾರವಾಯಿತೇ ? ಇದನ್ನು ಯಾರು ಹೇಳಿದರೋ ನನಗೆ ಗೊತ್ತಿಲ್ಲ ಎಂದು ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿರುವವರು ಹೇಳಿರುವಂತಾದ್ದು ನನ್ನ ಕಿವಿಗೆ ಬಿದ್ದಿದೆ. ಈ ವಿಚಾರದಲ್ಲಿ ಒಬ್ಬರಿಗೊಬ್ಬರಿಗೆ ಗೊತ್ತಿಲ್ಲದೇ ಇರುವ ಪರಿಸ್ಥಿತಿ ಇದೆ. ಈಗ ಆಕ್ಟೋಬರ್ ೨ನೇ ತಾರೀಖು ನಾನು ಜವಾಬ್ದಾರಿಯಿಂದ ನಿರ್ಧಾರ ಮಾಡಿರತಕ್ಕ ತಾರೀಖೇ ಇದು ? ಏಕೆಂದರೆ, ಮುಂದೆ ಹಾಕಿದಂಥ ತಾರೀಖಿನ ಬಗ್ಗೆ ಸದನಕ್ಕೆ ಮೊದಲೇ ತಿಳಿಸಿರಲಿಲ್ಲ ಜನರಿಗೂ ಸಹ ತಾವು ಮೊದಲೇ ತಿಳಿಸಿರಲಿಲ್ಲ. ಆದ್ದರಿಂದ, ಇದರ ಬಗ್ಗೆ ನಾನು ಉಚಿತವಾದಂಥ ವಿವರಣೆಯನ್ನು ತಮ್ಮಿಂದ ನಿರೀಕ್ಷೆ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಇವಕ್ಕೆ ಹೆಚ್ಚು ಕ್ಲಾರಿಫಿಕೇಷನ್ ಕೊಡತಕ್ಕದ್ದು ಏನೂ ಇಲ್ಲ. ನವಂಗೆ ಬೇಕಾಗಿರತಕ್ಕ ಪ್ರಮಾಣದಲ್ಲಿ ಕೈಮಗ್ಗದ ಬಟ್ಟೆ ಸಿಕ್ಕುವುದಿಲ್ಲ. ಪಕ್ಕದ ರಾಜ್ಯದಲ್ಲಿ ಕೈ ಮಗ್ಗದ ಬಟ್ಟೆ ಎಷ್ಟು ಸಿಕ್ಕುತ್ತದೆ ಅಷ್ಟು ಖರೀದಿ ಮಾಡುತ್ತೇವೆ. ಅದನ್ನು ಲೆಕ್ಕಕ್ಕೆ ತೆಗೆದು ಕೊಂಡರೂ ನವಂಗೆ ಬೇಕಾಗುವಷ್ಟು ೭ ಕೋಟಿ ಮೀಟರ್ ಆಷ್ಟು ಸಿಕ್ಕುವುದಿಲ್ಲ. ಎನ್‌ಟಿಸಿ ಅವರಿಂದ ಖರೀದಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಇದು ಎಲ್ಲಾ ಒಂದು ದೊಡ್ಡ ಯೋಜನೆ ಆದುದರಿಂದ ಒಂದೇ ಸಾರಿ ಇದನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಇದನ್ನು ಯಾರು ತೀರ್ಮಾನ ಮಾಡಿದರು ಎಂದು ಕೇಳಿದ್ದಾರೆ. ಇದನ್ನು ಸರ್ಕಾರದವರೇ ತೀರ್ಮಾನ ಮಾಡಿರುವುದು. ಆಗಸ್ಟ್ ೧೫ನೇ ತಾರೀಖು, ಆದಷ್ಟು ಬೇಗ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ನಿರ್ಧಾರ ಮಾಡಿದ್ದುದು ತಪ್ಪೇ ? ಮಾನ್ಯ ಸದಸ್ಯರು ನಿಮಿತ್ತ ಸಿಕ್ಕಿತು ಎಂದು ಬೆಳಕು ಹರಿಯುವವರೆಗೂ ಕಳ್ಳತನ ಮಾಡಿದರು ಎನ್ನುವ ಗಾದೆ ಹೇಳಿದರು. ಕಳ್ಳತನ ಮಾಡುವವರು ಶುಭ ಮಹೂರ್ತ ನೋಡಿಯೇ ಕಳ್ಳತನ ಮಾಡುತ್ತಾರೋ ಏನೋ ಗೊತ್ತಿಲ್ಲ ಆಗಸ್ಟ್ ೧೫ನೇ ತಾರೀಖು ಪ್ರಾರಂಭ ಮಾಡಬೇಕೆಂದು ನಾವೇ ತೀರ್ಮಾನ ಮಾಡಿದ್ದುದು. ಅಷ್ಟರಲ್ಲಿ ಆಗದೇವುದಿಲ್ಲ ಎಂದು ಗೊತ್ತಾದ ಮೇಲೆ ಒಂದೂವರೆ ತಿಂಗಳಷ್ಟು ಮುಂದೆ ಹಾಕಿದ್ದೇವೆ. ಇನ್ನು ಮಾನ್ಯ ಸದಸ್ಯರು ಎಷ್ಟು ಖರೀದಿ ಮಾಡಿದ್ದೀರಿ, ಎಷ್ಟು ಖರೀದಿ ಮಾಡಬೇಕು ಎನ್ನುವುದನ್ನು ಕೇಳಿದ್ದಾರೆ, ಅದರ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಆಕ್ಕಿಯನ್ನು ಕರ್ನಾಟಕ ರಾಜ್ಯದಲ್ಲಿ ಎಲ್ಲರಿಗೂ ಕೊಡುತ್ತೇವೆಂದು ಹೇಳಿದ್ದಿರಿ. ಈಗ ಅರ್ಬನ್ ಪ್ರದೇಶಕ್ಕೆ ಇಲ್ಲ ರೂರಲ್ ವಿರಿಯಾಕ್ಕೆ ಕೊಡುತ್ತೇವೆಂದು ಹೇಳಿ ಅದನ್ನೂ ಸಹ ಮುಂದಕ್ಕೆ ಹಾಕಿದಿರಿ. ಹಾಗೆಯೇ ಸೀರೆ, ಕುಪ್ಪಸ, ಪಂಜೆ, ತಾಳಿ ಭಾಗ್ಯ ಇವೆಲ್ಲಾ ಮುಂದಿನ ಮದುವೆ ಸೀಜನ್‌ಗೆ ಹೋಗುತ್ತಿದೆ. ನಮ್ಮ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ಇಷ್ಟು ಇದ್ದರೆ ಕೊಡಿ, ಉತ್ತರ ಕೊಡಲೇ ಬೇಕೆಂದು ನಿರೀಕ್ಷಣೆ ಮಾಡುವುದಿಲ್ಲ. ಇಷ್ಟು ಮಾತ್ರ ನಿಜ. ಮುಂದೆ ಬರತಕ್ಕ ಮಂಡಲ್ ಪಂಚಾಯತ್, ಮತ್ತು ಜಿಲ್ಲಾ ಪರಿಷತ್ .....

ಅಧ್ಯಕ್ಷರು.—ಈಗ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ವಿಚಾರ ಬೇಡ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಬಿಟ್ಟು ಬೇರೆ ಕೇಳುವುದಿಲ್ಲ. ಇದರ ಬಗ್ಗೆಯೇ ಕೇಳುವುದಕ್ಕೆ ರಾಶಿ ಇದೆ. ಇಲ್ಲಿ ಇಷ್ಟೇ ವಿಚಾರ, ಮುಂದೆ ಬರತಕ್ಕ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತು.....

ಅಧ್ಯಕ್ಷರು.—ತಾವು ಮಂತ್ರಿ ಆದನ್ನೇ ಹೇಳಲಿಕ್ಕೆ ಹೊರಟಿದ್ದೀರಿ.....

ಶ್ರೀ ಎಸ್. ಬಂಗಾರಪ್ಪ.—ಯಾವ ರೀತಿ ಕೇಳಬೇಕೆಂದು ಬರೆದು ಕಳುಹಿಸಿದರೆ ಆ ರೀತಿಯಲ್ಲಿ ಕೇಳುತ್ತೇವೆ.

ಅಧ್ಯಕ್ಷರು.—ಗವರ್ನರ ಸೆಕ್ಷನ್‌ನಲ್ಲಿ ಸೂಚನೆಯಲ್ಲಿ ಎಲ್ಲರೂ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಇಲ್ಲ. ತಾವು ಇದರ ಬಗ್ಗೆ ಹೆಚ್ಚಿನ ಮಾಹಿತಿ ಕೇಳುತ್ತೀರೆಂದು ಅವಕಾಶ ಕೊಟ್ಟಿದ್ದೇನೆ, ತಾವು ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಕೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಯಾವ ರೀತಿಯಲ್ಲಿ ಕೇಳಬೇಕೆಂದು ಬರೆದು ಕಳುಹಿಸಿದರೆ ಆ ರೀತಿ ಕೇಳುತ್ತೇವೆ.

ಇವೊತ್ತು ಒಂದು ತಾರೀಖಿನ್ನು ಸರ್ಕಾರ ನಿಗದಿ ಮಾಡಿದ ಮೇಲೆ ಆ ದಿನದಂದು ಕಾರ್ಯಕ್ರಮವನ್ನು ಜಾರಿಗೆ ಕೊಡಬೇಕೆಂಬ ವಿಚಾರದಲ್ಲಿ ಬಡವರಿಗೆ ಸಹಾಯ ಮಾಡಬೇಕೆಂಬ ಬಗ್ಗೆ ಎಷ್ಟು ಆಸೆ ಇರ ಬೇಕಾಗಿತ್ತೋ ಅಷ್ಟಿದ್ದರೆ ಒಳ್ಳೆಯದಿತ್ತು. ಆದರೆ ಅದು ಇಲ್ಲ. ಇವರು ಅಕ್ಕಿ, ಪಂಚೆ, ಸೀರೆ, ತಾಳಿ ಕೊಡುತ್ತೇವೆಂದಾಗ ನಾವು ಅದನ್ನು ಸ್ವಾಗತ ಮಾಡಿದ್ದೇವೆ. ಆದರೆ ರಾಜಕೀಯದ ಉದ್ದೇಶಕ್ಕೋಸ್ಕರ ಒಂದು ಕಾರ್ಯಕ್ರಮ ತಂದರೆ, ಅದನ್ನು ಬೇಕಾದ ಹಾಗೆ ಬದಲಾಯಿಸಿಕೊಂಡರೆ ಅದು ಕರ್ನಾಟಕದ ಜನತೆ ಮುಂದೆ ಇರುವ ಪ್ರಶ್ನೆಯಾಗುತ್ತದೆ. ಮುಂದೆ ಬರುವ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯ್ತಿ ಚುನಾವಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ಮುಂದಕ್ಕೆ ಹಾಕಿದ್ದಾರೆ. ಚುನಾವಣೆ ಬರಬೇಕು. ಅದಕ್ಕೆ ಮುಂಚೆ ಇವರು ಜನರಿಗೆ ಉಚಿತ ಸೀರೆ ಪುಸ್ತಕ ಇತ್ಯಾದಿ ಹಂಚಬೇಕು. ಜನ ಇವರಿಗೆ ಓಟ್ ಹಾಕಬೇಕು. ಇದು ಇವರ ಮನಸ್ಸಿನಲ್ಲಿದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ, ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅಕ್ಕಿ ಕಡಿಮೆ ಬೆಲೆಯಲ್ಲಿ ಕೊಡುತ್ತೇವೆ, ನಗರ ಪ್ರದೇಶಗಳಲ್ಲಿ ಇಲ್ಲ ಎಂದು ಏಕೆ ಹೇಳಬೇಕು ? ಈ ಉದ್ದೇಶದಿಂದ ಸರ್ಕಾರದವರು, ಇದನ್ನು ರಾಜಕೀಯದ ಉದ್ದೇಶದಿಂದ ತಿರ್ಮಾನ ಮಾಡಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನವೆಂಬರ್ ೧ನೇ ತಾರೀಖಿನಿಂದ ಗ್ರಾಮಾಂತರ ಪ್ರದೇಶದ ಬಡ ಜನರಿಗೆ ಅಗ್ಗದ ದರದಲ್ಲಿ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದೇವೆ. ಸೀರೆ ಬಟ್ಟೆ ತಯಾರಿಲ್ಲ. ಪಟ್ಟಣ ಪ್ರದೇಶದಲ್ಲಾದರೆ ಕಡು ಬಡವರಿಗಾಗಿ ವಿಶೇಷ ವ್ಯವಸ್ಥೆ ಇದೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ವಿಶೇಷ ವ್ಯವಸ್ಥೆ ಇಲ್ಲದಿರುವುದರಿಂದ ಅಕ್ಕಿಯನ್ನು ಗ್ರಾಮೀಣ ಪ್ರದೇಶದಲ್ಲಿ ಕೊಡುವ ಯೋಜನೆ ತಂದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಆದರೆ ಚುನಾವಣೆ ಕಾಲದಲ್ಲಿ ಇಡೀ ಕರ್ನಾಟಕದ ಜನತೆಗೆ ಹಂಚು ವುದಾಗಿ ಹೇಳಿಕೊಂಡು ಪ್ರಿಂಟ್ ಮಾಡಿ ಹಂಚಿದ್ದೀರಿ.

ಶ್ರೀ ಜಿ. ಬಸವಣ್ಣಪ್ಪ.—ಈಗಾಗಲೇ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ನಮ್ಮ ಸಮಾಜದಲ್ಲಿ ಕಡು ಬಡವರಿದ್ದಾರೆ. ಮಾಲ್-ನ್ಯೂಟ್ರಿಷನ್‌ನಿಂದ ನರಳುತ್ತಿದ್ದಾರೆ. ಕಾರಣಾಂತರ ಗಳಿಂದ ಈಗಿರುವ ಬೆಲೆಯಲ್ಲಿ ಅವರು ಅಕ್ಕಿಕೊಳ್ಳುವುದಕ್ಕಾಗುವುದಿಲ್ಲ. ಅಂಥವರಿಗೆ ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ದರದಲ್ಲಿ ಅಕ್ಕಿ ಕೊಡುತ್ತೇವೆಂದು ಹೇಳಿದ್ದೇವೆಯೇ ಹೊರತು ಎಲ್ಲರಿಗೂ ಇಲ್ಲ.

ಶ್ರೀ ಕೆ. ಪೆಚ್, ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಈ ಅಕ್ಕಿ ಕೊಡತಕ್ಕಂಥ ಯೋಜನೆ ಮೊದಲಿನಿಂದಲೂ ಇತ್ತು. ಗ್ರಾಮೀಣ ಪ್ರದೇಶದಲ್ಲಿ ಮತ್ತು ನಗರ ಪ್ರದೇಶದಲ್ಲಿ ಹೊಸದಾಗಿ ನೀವೇನೂ ಆರಂಭ ಮಾಡಲಿಲ್ಲ. ನೀವು ಮಾಡುತ್ತಿರುವುದು ಏನೆಂದರೆ ಕಡು ಬಡವರಿಗೆ ಎಂದು ಹೇಳಿ ಕೊಳ್ಳುತ್ತಿದ್ದೀರಿ ಅಷ್ಟೇ. ಬಡವರ ಸ್ಟ್ಯಾಟಿಸ್ಟಿಕ್ ಮಾಹಿತಿಯನ್ನು ನೀವೇನೂ ತಯಾರು ಮಾಡ ಬೇಕಾಗಿಲ್ಲ. ಈಗಾಗಲೇ ಮತ್ತು ಹಿಂದೆ ಅದನ್ನೆಲ್ಲಾ ಮಾಡಿಟ್ಟಿದ್ದಾರೆ. ಸುಮ್ಮನೆ ಏಕೆ ಅದನ್ನೊಂದು ನೆವ ಹೇಳುತ್ತೀರಿ. ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿಲ್ಲ. ಇಷ್ಟೆಲ್ಲಾ ಹೇಳಿಕೊಂಡು ಆಗಸ್ಟ್ ೧೫ರಂದು ತರುತ್ತೇವೆ ಎಂದು ಹೇಳಿದ್ದ ಯೋಜನೆಯನ್ನು ಮುಂದಕ್ಕೆ ಹಾಕಿರುವುದನ್ನು ಈ ಸದನದ ಗಮನಕ್ಕೆ ತರದೆ ಪತ್ರಿಕೆಗೆ ಒಂದನ್ನೂಸನ್ನು ಲೀಕ್ ಮಾಡುವ ರೀತಿ ಮಾಡಿದ್ದೀರಿ. ಇದು ಈ ಸದನಕ್ಕೂ ಹಾಗೂ ಜನತೆಗೂ ಬಗೆದ ದ್ರೋಹವಲ್ಲವೇ ? ಇದಕ್ಕೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅಪಾಲಜಿ ಕೇಳತಕ್ಕಂಥ ಅಪರಾಧ ಮಾಡಿದ್ದರೆ ಸಾವಿರ ಸಲ ಕೇಳುತ್ತೇನೆ. ಈ ಸದನದ ಮುಂದೆ ನನಗೆ ಜ್ಞಾಪಕವಿರುವ ಮಟ್ಟಿಗೆ ಇಂತಹ ತಾರೀಖಿನಿಂದ ಈ ಯೋಜನೆಗಳನ್ನು ಶರಂ ಮಾಡುತ್ತೇವೆಂದು ಹೇಳಿರಲಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹೇಳಿದ್ದೀರಿ...ಹೇಳಿದ್ದೀರಿ. ಆಗಸ್ಟ್ ೧೫ ಎಂದು.

ಶ್ರೀ ರಾಮಕೃಷ್ಣ ಹೆಗಡೆ.—ಹಾಗಿಲ್ಲ. ಈ ಸ್ಕೀಂಗಳನ್ನು ಈ ಸದನದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಅನೌನ್ಸ್ ಮಾಡಲಾಗಿತ್ತು. ಅದು ನಿಜ, ಇಂಥದ್ದೇ ತಾರೀಖಿನಿಂದ ಎಂಬುದು ಅಡ್ಮಿನಿಸ್ಟ್ರೇಷನ್‌ಗೆ ಸೇರಿದ ವಿಚಾರ. ಅವರ ಅನುಕೂಲ ನೋಡಿಕೊಂಡು ಅದು ಜಾರಿಗೆ ಬರುತ್ತದೆ, ಮತ್ತು ಈ ಯೋಜನೆಗೂ ಜಿಲ್ಲಾಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳ ಚುನಾವಣೆಗಳಿಗೂ ಏನೂ ಸಂಬಂಧ ಇಲ್ಲ. ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹೊಸ ಹೊಸ ಸ್ಕೀಂಗಳನ್ನು ಸರ್ಕಾರದ ಪರವಾಗಿ ಜನತೆಯ ಮುಂದೆ ಇಡಲಿಕ್ಕೆ ಇದೇನು ಕಾಂಗ್ರೆಸ್ ಸರ್ಕಾರವಲ್ಲ. ಗುಜರಾತ್‌ನಲ್ಲಿ, ಮಧ್ಯಪ್ರದೇಶಗಳಲ್ಲಿ ಏನೇನು ಮಾಡಿದ್ದಾರೆ ಎಂಬುದು ಗೊತ್ತುಂಟು.

ಶ್ರೀ ಬಿ. ಬಸವಲಿಂಗಪ್ಪ.—ಅವರದು ಇರಲ್ಲಿ. ತಮ್ಮದು ಹೇಳಿ.

ಅಧ್ಯಕ್ಷರು.—ಶ್ರೀ ಸಿ. ಎಂ. ಉದಾಸಿಯವರು ಈಗ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತಾರೆ

ii) ಸರ್ಕಾರಿ ಆಸ್ಪತ್ರೆಗಳಲ್ಲಿ ಎಕ್ಸರೇ ಫಿಲ್ಮ್ ಸಪ್ಲೈ ಮಾಡದೇ ಇರುವುದು

ಶ್ರೀ ಸಿ. ಎಂ. ಉದಾಸಿ.—ಸರ್ಕಾರಿ ಆಸ್ಪತ್ರೆಗಳಲ್ಲಿ ಎಕ್ಸ್-ರೇ ಫಿಲ್ಮ್ ಸಪ್ಲೈ ಮಾಡದೇ ಇರುವ ಕಾರಣದಿಂದಾಗಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯ ಬಗ್ಗೆ ನಾನು ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ(ಆಹಾರ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೇ,

೧೯೮೪ರಲ್ಲಿ ಮೆಸರ್ಸ್ ಹಿಂದುಸ್ಥಾನ ಫೋಟೋ ಫಿಲ್ಮ್‌ರವರು ಸರ್ಕಾರಿ ದವಾಖಾನೆಗಳಿಗೆ ಕ್ಷ-ಕಿರಣ ಫಿಲ್ಮ್ ಮತ್ತು ಕೆಮಿಕಲ್ಸ್‌ಗಳನ್ನು ಒದಗಿಸುತ್ತಿದ್ದರು. ಏಪ್ರಿಲ್ ೧೯೮೪ರಲ್ಲಿ ಮತ್ತು ಆಗಸ್ಟ್ ೧೯೮೪ರಲ್ಲಿ ಮೆಸರ್ಸ್ ಹಿಂದೂಸ್ತಾನ ಫೋಟೋ ಫಿಲ್ಮ್‌ರವರು, ಅದರ ಮೂಲದರಗಳನ್ನು ಹೆಚ್ಚಿಸಿದ್ದು ಅಲ್ಲದೆ, ಸರಬರಾಜು ಮಾಡಲು ಮುಂಗಡ ಹಣಕ್ಕಾಗಿ ಒತ್ತಾಯಿಸುತ್ತಿದ್ದರು. ಆದ್ದರಿಂದ ಫಿಲ್ಮ್ ಮತ್ತು ಕೆಮಿಕಲ್ಸ್‌ಗಳನ್ನು ಪಡೆದು ಕೊಳ್ಳುವಲ್ಲಿ ಕೆಲವು ವೇಳೆ ನಿಧಾನವಾಗುತ್ತಿತ್ತು.

೧೯೮೫ನೇ ಸಾಲಿನಲ್ಲಿ ಮೆಸರ್ಸ್ ಹಿಂದುಸ್ತಾನ್ ಫೋಟೋ ಫಿಲ್ಮ್‌ರವರು ಬೆಂಗಳೂರು ನಲ್ಲಿರುವ ಮೆಸರ್ಸ್ ಭಾಯಾಗ್ರಫಿಕ್ಸ್‌ರವರಿಗೆ ದಾಸ್ತಾನುಗಾರರಾಗಿ ಮತ್ತು ಹಂಚಿಕೆದಾರರಾಗಿ ನೇಮಿಸಲ್ಪಟ್ಟರು. ೩೦-೫-೮೫ರಲ್ಲಿ ಈ ಇಲಾಖೆಯು ಮೇಲ್ಕಂಡ ಹಂಚಿಕೆದಾರರಿಂದ, ಫಿಲ್ಮ್ ಮತ್ತು ಕೆಮಿಕಲ್ಸ್‌ನ್ನು ಸಾಲದ ಆಧಾರದ ಮೇಲೂ ಸರಬರಾಜು ಮಾಡಲು ಒಪ್ಪಂದ ಮಾಡಿಕೊಳ್ಳಲಾಯಿತು. ಈಗ ಈ ಕಂಪನಿಯು ಮುಖಾಂತರ ಕ್ಷ-ಕಿರಣ ಫಿಲ್ಮಂ ಮತ್ತು ಕೆಮಿಕಲ್ಸ್‌ಗಳನ್ನು ಸಕಾಲದಲ್ಲಿ ಎಲ್ಲಾ ದವಾಖಾನೆಗಳೂ ಪಡೆದು ಕೊಳ್ಳಲಾಗುತ್ತಿವೆ. ಅಲ್ಲದೆ ಸರ್ಕಾರವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರಿಗೆ ಆಗಿಂದ್ಹಾಗೆ ಹೆಚ್ಚುವ ತೆರಿಗೆಯನ್ನು ಪರಿಷ್ಕೃತ (ರಿವೈಸ್ಡ) ಮಾಡಲು ಅಧಿಕಾರವನ್ನು ಕೊಟ್ಟಿರುತ್ತದೆ.

ಶ್ರೀ ಸಿ. ಎಂ. ಉದಾಸಿ —ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾಗಿರುವ ಹಣವನ್ನು ಸೆಪ್ಟೆಂಬರ್ ೩೦ರೊಳಗೆ ಖರ್ಚು ಮಾಡಬೇಕಾಗಿತ್ತು. ಆದರೆ ಅದೂ ಖರ್ಚಾಗಿಲ್ಲ. ೩೦-೫-೮೫ರಲ್ಲಿ ಬಿಡುಗಡೆಯಾದ ಹಣವನ್ನು ಖರ್ಚು ಮಾಡುವುದಕ್ಕೆ ತೊಂದರೆಯಾಗಿದೆ. ಇದಕ್ಕೆ ಸೂಕ್ತ ದರವನ್ನು ಪರಿಷ್ಕೃತ ದರದಲ್ಲಿ ಕೊಡುತ್ತಿಲ್ಲವೆಂದು ತಿಳಿಸುತ್ತಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(ಆ ವೇಳೆಗೆ ಪ್ರೇಕ್ಷಕರ ಎತ್ತರಾಗಿನ ಗ್ಯಾಲರಿಯಿಂದ ನಾಲ್ಕು ಜನ ಯುವಕರು ನಾಗ ಸಂದ್ರದ ಜೀತಗಾರರಿಗೆ ಭೂಮಿ ಕೊಡಿ" ಎಂದು ಘೋಷಣೆ ಹಾಕಿದರು).